ದಿನಾಂಕಃ **07-03-2023**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಬಿ ಜೆ ಆರ್ ವಕೀಲರಿಂದಃ</u>

ನನ್ನ ವಕೀಲರಿಗೆ ನಾನೇ ವಿಚಾರ ತಿಳಿಸಿ , ಲಿಖಿತ ಹೇಳಿಕೆ ಸಲ್ಲಿಸಿದ್ದೇನೆ. ಲಿಖಿತ ಹೇಳಿಕೆಯಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನನ್ನ ಜಮೀನಿನ ಚೆಕ್ಕುಬಂದಿಯನ್ನು ಹೇಳಿ ಬರೆಸಿದ್ದೇನೆ. ಸರ್ಕಾರ ನನಗೆ ಸಾಗುವಳಿ ಚೀಟಿ ನೀಡಿದ್ದು , ಅದರಲ್ಲಿ ನಮೂದಾಗಿರುವಂತೆ ಚೆಕ್ಕುಬಂದಿಯನ್ನು ಬರೆಸಿದ್ದೇನೆ. ಪ್ರತವಾದ ಪತ್ರದಲ್ಲಿ ನಮೂದಾಗಿರುವ ಸ್ವತ್ತಿನ ಪಹಣಿ ನಮ್ಮ ಅಣ್ಣನ ಹೆಸರಿನಲ್ಲಿದೆ. ಲಿಖಿತ ಹೇಳಿಕೆ ಸಲ್ಲಿಸಿದ ನಂತರ ನಮ್ಮ ಸ್ವತ್ತಿನ ಚೆಕ್ಕುಬಂದಿಯನ್ನು ತಿದ್ದು ಪಡಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಿಡಿ-1 ದಾಖಲೆಯಲ್ಲಿ ನಮ್ಮ ಸ್ವತ್ತಿನ ಚೆಕ್ಕುಬಂದಿ ನಮೂದಾಗಿಲ್ಲ ಎಂದರೆ ಸರಿ. ಸರ್ಕಾರಿ ದಾಖಲೆಗಳಾದ ಹಕ್ಕು ಪತ್ರ ಮತ್ತು ಸಾಗುವಳಿಯಲ್ಲಿ ಸ್ವತ್ತಿನ ಚೆಕ್ಕುಬಂದಿಯನ್ನು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ದಾಖಲೆಯಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ಸಾಗುವಳಿ ಕೊಡುವ ಮೊದಲು ಕಂದಾಯ ಅಧಿಕಾರಿಗಳು ಕಚ್ಚಾ ನಕ್ಷೆಯನ್ನು ತಾಯಾರಿಸುತ್ತಾರೆ ಎಂದರೆ ಸರಿ. ತಹಶೀಲ್ದಾರ್ ಕಚೇರಿಯಲ್ಲಿ LND AGR/27-1952-53 ರ ದಾಖಲೆಗಳು ಸಿಗುತ್ತವೆ ಎಂದರೆ ಸರಿ. ಸದರಿ ದಾಖಲೆಗಳನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದಿಲ್ಲ. ಸಾಗುವಳಿಯನ್ನು ಮಾತ್ರ ಪಡೆದಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ .

ವಾದಿ ಜಾಡರಹಳ್ಳಿ ಸ. ನಂ. 60 ಕ್ಕೆ ಸಂಬಂದಿಸಿದಂತೆ ನಮ್ಮ ವಿರುದ್ದ ದಾವಾ ದಾಖಲಿಸಿದ್ದಾರೆ. ಸ.ನಂ. 60 ಜಮೀನನ್ನು ನಾನು ನೋಡಿದ್ದೇನೆ. ಸ.ನಂ. 60 ರಲ್ಲಿ

ಸುಮಾರು 10-12 ಜನರು ಸಾಗುವಳಿ ಮಾಡುತ್ತಿದ್ದಾರೆ. ಎಲ್ಲರೂ ಬುಕ್ಕಾಪಟ್ಟಣ ಗ್ರಾಮದವರು ಎಂದರೆ ಸರಿ.

ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.